ಭಾಗವತನ ಕೀರಲು ಕಂಠವನ್ನೂ ಏನೂ ದಾದು ಮಾಡದೆ ರಂಗದ ಮಧ್ಯೆ ಕೂತು ಕಾಲು ಹೊಸೆದು ಹೋ ಅಂತ ರಾಗ ಎತ್ತಿದನೆ. ಆಗ ಅವನನ್ನು ರಾಮನ ಪಾರ್ಟು ಕಟ್ಟಿದ ಶೇಖರನೋ, ಲಕ್ಷ್ಮಣನಾಗಿ ಚಂಡೆಯ ನಾದವೆತ್ತ ನಾನೆತ್ತ ಎಂದು, ಅಣ್ಣನ ಮಾತಿಗೆ ಹೂಂಗುಡುವುದೇ ಲಕ್ಷ್ಮಣನ ಕೆಲಸ ಎಂದು ನಂಬಿದ್ದ, ಶಾಲೆಯಲ್ಲಿ ರ್‍ಯಾಂಕವಾಲ ಎಂಬ ಬಿರುದಿನ ನಮ್ಮ ಮನೋಜನೋ ಬಂದು, ಅಲ್ಲೇ ರಮಿಸಿ ಕರೆದು ತಂದರೆ, ಮತ್ತೆ ಭಾಗವತನ ದನಿಗೆದರಿ... ಶ್ರೀಮದ್ ರಘೋದ್ಭವಂ... ಅಂತ ಮುಂದುವರಿಬಹುದಿತ್ತು ಇಲ್ಲವಾದರೆ, ಇದ್ದಿಲು ಬೂದಿ ಗುಲ್‌ಮೊಹರ್ ಎಸಳುಗಳಿಂದ ಅಲಂಕೃತಗೊಂಡ ರಾವಣಾಸುರನು ಸೀದಾ, ಉದ್ದನೆಯ ಆರಾಮ ಕುರ್ಚಿಯಲ್ಲಿ ಅರೆಗಣ್ಣು ಮಾಡಿ 'ಈಗ ಗಾಂಧಿಯನ್ನು ಕುಂದಾಪುರದ ಗಡಿಗಿಳಿಸಿ ಬಂದೆವಲ್ಲವೆ' ಎಂಬ ತೃಪ್ತಿಯ ಕನಸಲ್ಲಿ ಕಳೆದುಹೋದ ಅಜ್ಜನ ಮುಂದೆ ಅವತರಿಸಿದರೆ, ಮೊಮ್ಮಗನ ಅಪೀಲಿಗಿಂತಲೂ ತನ್ನ ಕನಸು ಕಾಣೆಯಾಗಿ ಮತ್ತೆ ಈ ಹಾಳು ಬರ್ಬಾದು ಲೋಕಕ್ಕೆ ತಂದಿದ್ದಕ್ಕಾಗಿಯಾದರೂ ನಮ್ಮೆಲ್ಲರ ಬಲಗೈ ಹಸ್ತಕ್ಕೆ ಒಂದೊಂದು ಬೆತ್ತದ ಏಟು ಬಿತ್ತು ಎಂದೇ ಖಾತ್ರಿ. ರಂಗಸಜ್ಜಿಕೆಯಿಂದ ಚೋಟುದ್ದದ ಮಾಣಿಮೋಹನ ತುಂಡಗಪ್ಪು ತೆಗೆದು ಕೆಳಗೆ ಜಿಗಿಯುತ್ತಲೂ, ಬೆತ್ತದ ರುಚಿ ನೆತ್ತಿಗೆ ಹತ್ತಿದಂತಾದ ಸಕಲರೂ ಓಡಿ ಅವನನ್ನು ಅಡ್ಡ ನಿಲ್ಲಿಸಿ ದಾವೆ ಹೂಡಲು ಪ್ರಾರಂಭಿಸುತ್ತಿದ್ದರು. ಇಂತಹ ಕಂಟಕ ನಿಭಾಯಿಸುವಲ್ಲಿ ನಿಸ್ಸೀಮನೆನಿಸಿ ಬಿಟ್ಟವ ಮದಣ್ಣ. ಸಾಮಾನ್ಯವಾಗಿ ಸೊಂಟದ ಕೆಳಗೆ ಪಂಚೆ ಸುತ್ತಿಕೊಂಡು 'ಹಾಸ್ಯಗಾರನಾಗುದ್ಕೆ ನಾನೇ ಲಾಯಕ್' ಅಂತ ತನಗೆ ತಾನೇ ಒಪ್ಪಿಕೊಂಡ ನಮ್ಮ ಟೀಮಿನ ಹಿರೀಕರಲ್ಲೊಬ್ಬ. ಒಮ್ಮೆಲೆ ಪದ ಕಟ್ಬೇಕು ಅದು ಮದಣ್ಣನೇ. ಹಾಡುವ ಕಂಠ ಇಲ್ಲದಿದ್ದರೂ ಅವನಿಗೆ ಅದೊಂದು ತೊಡರು ಆಗಿದ್ದಿಲ್ಲ.

'ಏಗೆ ಏಗೆ ಉಂದ ಪದಾ ಏನ್ರೋ ಕೇಳ್ರೀ ಹಾಂ' ಅಂತ ಶುರುವೇ. ಡಾ. ರಾಜಕುಮಾರ ಈಗ ನಮ್‌ಭಾಷೇಲಿ ಹಾಡು ಅಂತ ರಾಗ –

'ಉಂದ್ ಮಾತs
ನಂಗ್ ಗುತ್ತೀsದ
ಅದಲ್ವೇ
ಮತ್ತೇನ
ಬುಡ್ಕೆ ಬಂದರೆ ಕಿಮೀಲೆ ಹೇಳುವೆ'

ಒಂದು ಮಾತು, ನಂಗೆ ಗೊತ್ತು... ಪದ ಹೀಗೆ ಒಂದು ಸೀಮೆಯ ಜಾತಿಯ ಭಾಷೆಗೆ ಬೇಷರತ್ತಾಗಿ ತರ್ಜುಮೆಗೊಂಡು ಉಕ್ಕಿದ ನಗೆಗೆ ಆಚೆ ಒಂದು ಮೈಲಿ ದೂರ ಅಬ್ಬರಿಸುತ್ತಿದ್ದ ಕಡಲು ನಿಂತು ಕಿವಿ ಆನಿಸಿರಬೇಕು. ನಗೆಯ ಅಬ್ಬರ ಇಳಿದ ಮೇಲೆ ಗೀತಕ್ಕನಿರಬೇಕು – 'ಏ, ತಮ್ಮಾ ಆದ್ರೂ ಅದೆಂಥದದ... ಬುಡ್ಕೆ ಬಂದ್ರೆ ಥೋ ಚೆಂದ ಅನ್ನೂದಲೂ ಬಿಡ ಊಂದ ನಮೂನಿ ಆತೀದಪಾ' ಅಂತ ನಗುತ್ತ ತಕರಾರೆತ್ತಿದರೆ ಮದಣ್ಣನದು ಮಾಸ್ತರರ ಗೈರತ್ತು. 'ಹಂಗರೆ ಉಪ್ಕಾ ಮಾರಾಯ್ತಿ. ನಮ್ ಮಾತ್ ಲೈಕಿಲ್ಲಾ.' ಶಾಲಿನಿಯದು ಎಂದೂ ಯಾಕೂ ಮುಗಿಯದ ನಗೆ. 'ನೆಗ್ಯಾಡ್ತೆ ನೆಗ್ಯಾಡ್ತೆ ಬಾಯ್ ತಿಕ್ಕಂಡ ಹೆದ್ದಾರಿ ದೂಳೆಲ್ಲ ಹೊಟ್ಟಿಗ್ ತುಂಬ್ಕಾ. ಉಂಬೂಕ್ ಹ್ಯಾಂಗಾಗೂsದ' ಅಜ್ಜಿಯದು ಯಾವಾಗಲೂ ಬೇಸರ. ನಾನು ಎಷ್ಟು ಉಂಡರೂ ಅವಳಿಗೆ ಹೊಟ್ಟೆ ತುಂಬಿದಂತೆ ಅನ್ನಿಸುತ್ತಲೇ ಇರಲಿಲ್ಲ. 'ಶಾಲೂಗೆ ಹೇಳ್ದೆಯಾ? ಅದ್ಕೆ ಬೆಳಗಾಗ್ ಇದ್ದಕೂಡ್ಲೆ ಎಯ್ಡ್ ಮಾಯನಹಣ್ಣ ಕುಟ್ಟಿ, ಉಂದ್‌ಸತಿಗೆ ನೆಗ್ಯಾಡ್ಸ ಬಿಡ್ರಿ. ಅದ ರಾತ್ರೀ ಮನಗುವಂಕರಿಗೂ ಹಾಂಗೇ ನೆಗ್ಯಾಡ್ರೆ ಇರ್ತೀsದ' ಹೇಳಿದವರ್‍ಯಾರು? ಓ, ಪಾಂಡುಮಾವ, ಉಸಿರಾಕಿದಳು ಶಾಲಿನಿ. ಈಗ ಈ ಗಡಿಬಿಡಿಯ ಬದುಕಿನ ಸುಳಿಯಲ್ಲಿ ಸಿಕ್ಕು ನಗು ಎಂಬುದು ಮರೆತಂತಾಗಿದೆ. ಯೋಗ, ನಗೆ ಕ್ಲಾಸ್